# ವರದಿಯ ಸಾರಾಂಶ

## ಬಲವಂತದ ರಾಜೀನಾಮೆ, ಕಳ್ಳತನದ ಮುಚ್ಚುವಿಕೆ: ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಕಂಪನಿಗಳೂ ಹೇಗೆ ಮುಚ್ಚುತ್ತಿವೆ ಮತ್ತು ಅದರಿಂದ ಕಾರ್ಮಿಕರ ಮೇಲಾಗುವ ಪರಿಣಾಮಗಳ ಬಗ್ಗೆ ಒಂದು ಅಧ್ಯಯನ ವರದಿ

ಕೋವಿಡ್ ಲಾಕ್‌ಡೌನ್ ನಂತರ, ಗಾರ್ಮೆಂಟ್ಸ್ ಮಾಲೀಕರು ಕಾರ್ಮಿಕರಿಂದ ಬಲವಂತವಾಗಿ ರಾಜೀನಾಮೆ ಪಡೆದಿದ್ದರಿಂದ ಮತ್ತು ಹೇಳದೇ ಕೇಳದೆ ಕಳ್ಳತನದಿಂದ ಕಾರ್ಖಾನೆ ಮುಚ್ಚಿದ ಪರಿಣಾಮವಾಗಿ ಬೆಂಗಳೂರಿನಲ್ಲಿ ಬಹುತೇಕ ಗಾರ್ಮೆಂಟ್ಸ್ ಕಾರ್ಮಿಕರು ಕೆಲಸ ಕಳೆದುಕೊಂಡರು. ಗಾರ್ಮೆಂಟ್ ಉದ್ಯಮದಲ್ಲಿ 'ಬಲವಂತದ ರಾಜೀನಾಮೆ' ಎಂಬುದು ಸರ್ವವ್ಯಾಪಿ ಪಿಡುಗಾಗಿದ್ದು, ಕಾರ್ಮಿಕರು ತಮ್ಮ ಕೆಲಸಕ್ಕೆ ಅನಿವಾರ್ಯವಾಗಿ ರಾಜೀನಾಮೆ ನೀಡಲೇ ಬೇಕಾದಂತಹ ಸಂದರ್ಭಗಳನ್ನು ಆಡಳಿತವರ್ಗದವರು ಯಾವ ರೀತಿ ಸೃಷ್ಟಿಸುತ್ತಾರೆ ಎಂಬುದನ್ನು ಕುರಿತು ಈ ವರದಿಯು ದಾಖಲಿಸುತ್ತದೆ. ಬೆಂಗಳೂರಿನ ಗಾರ್ಮೆಂಟ್ಸ್ ಮಾಲೀಕರು ಈ ರೀತಿ ಮಾಡಿ, ಹಲವಾರು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದರು, ಕೆಲವರು ಇಡೀ ಕಾರ್ಖಾನೆಗಳನ್ನೇ ಮುಚ್ಚಿಹಾಕಿದರು. ಕೆಲಸದಿಂದ ತೆಗೆಯುತ್ತೇವೆಂದಾಗಲೀ, ಕಾರ್ಖಾನೆ ಮುಚ್ಚುತ್ತೇವೆಂದಾಗಲೀ ಆಡಳಿತವರ್ಗದವರು ಕಾರ್ಮಿಕರಿಗೆ ಮುಂಚಿತವಾಗಿ ನೋಟೀಸ್ ಕೊಟ್ಟಿರಲಿಲ್ಲ. ಅಥವಾ ಅವರಿಗೆ ಪರಿಹಾರವನ್ನೂ ನೀಡಲಿಲ್ಲ. ಇದ್ದಕ್ಕಿದ್ದಂತೆ ಬಂದೆರಗಿದ ಈ ಆಘಾತದಿಂದ ಕಾರ್ಮಿಕರು ನಿರುದ್ಯೋಗಿಗಳಾದರು. ಅವರ ಸೇವಾವಧಿ ಕಡಿತಗೊಂಡಿತು. ಆರೋಗ್ಯದ ತೊಂದರೆಯಾದಾಗ ಇ.ಎಸ್.ಐ ಸೌಲಭ್ಯವನ್ನು ಪಡೆದುಕೊಳ್ಳಲಾಗಲಿಲ್ಲ. ಜೊತೆಗೆ ಅವರ ಆದಾಯ ನಷ್ಟವಾಗಿ ಜೀವನ ನಡೆಸಲೇ ಕಷ್ಟವಾಯಿತು. ಸಾಲ ಮರುಪಾವತಿ ಮಾಡಲಾಗದೆ ಅವು ಬೆಟ್ಟದಷ್ಟು ಏರಿದವು, ಮನೆ ಬಾಡಿಗೆ ಕಟ್ಟಲಾಗದೆ, ಊಟಕ್ಕೆ ಹಣವಿಲ್ಲದೆ ಕಾರ್ಮಿಕರು ಅತ್ಯಂತ ಸಂಕಷ್ಟಕ್ಕೀಡಾದರು.

## ಈ ಅಧ್ಯಯನದ ಬಗ್ಗೆ

ಈ ಅಧ್ಯಯನವನ್ನು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಮತ್ತು ಪರ್ಯಾಯ ಕಾನೂನು ವೇದಿಕೆ (ALF) ಗಳು ಜೊತೆಯಾಗಿ ನಡೆಸಿದವು. ಅಧ್ಯಯನವು ಕೇಂದ್ರೀಕರಿಸಿದ ಮೂರು ಮುಖ್ಯ ಅಂಶಗಳನ್ನು ಅರಿಯಲು ಕಾರ್ಮಿಕರ ಸಮೀಕ್ಷೆಯನ್ನು ನಡೆಸಲಾಯಿತು. ಆ ಅಂಶಗಳೆಂದರೆ

1. ಗಾರ್ಮೆಂಟ್ಸ್ ಕಂಪನಿಗಳು ಮುಚ್ಚಲು ಅಥವಾ ಕಾರ್ಮಿಕರನ್ನು ಕೆಲಸದಿಂದ ತೆಗೆಯಲು, ಅನುಸರಿಸಿದ ಕ್ರಮಗಳು;
2. ಕುಟುಂಬದ ಆದಾಯ ನಿಂತುಹೋಗಿದ್ದರಿಂದ ಕಾರ್ಮಿಕರ ಬದುಕಿನ ಮೇಲಾದ ಪರಿಣಾಮಗಳು;
3. ಇದ್ದಕ್ಕಿದ್ದಂತೆ ಕಾರ್ಖಾನೆ ಮುಚ್ಚಿದ್ದರಿಂದ ಮತ್ತು ಕೆಲಸದದಿಂದ ತೆಗೆದುಹಾಕಿದ್ದರಿಂದ ಕಾರ್ಮಿಕರ ಕೆಲಸ ಮತ್ತು ಸೇವಾವಧಿ ನಷ್ಟವಾಗಿದ್ದರ ಬಗ್ಗೆ

ಸಮೀಕ್ಷೆಯ ಮೊದಲ ಹಂತವನ್ನು ಸೆಪ್ಟೆಂಬರ್–ಅಕ್ಟೋಬರ್ 2020ನಲ್ಲಿ ಕೈಗೊಂಡು, 89 ಕಾರ್ಮಿಕರ ಸಮೀಕ್ಷೆಯನ್ನು ಟೆಲಿಫೋನ್ ಮೂಲಕ ನಡೆಸಲಾಯಿತು. ಎರಡನೆಯ ಹಂತವನ್ನು ಜನವರಿ–ಫೆಬ್ರವರಿ 2021 ಅವಧಿಯಲ್ಲಿ ಕೈಗೊಂಡು, ಹಿಂದಿನ 89 ಕಾರ್ಮಿಕರಲ್ಲಿ 65 ಕಾರ್ಮಿಕರ ಸಮೀಕ್ಷೆಯನ್ನು

ನಡೆಸಲಾಯಿತು. ಎರಡು ಹಂತದಲ್ಲಿ ಸಮೀಕ್ಷೆ ನಡೆಸಿದ್ದರಿಂದ 2020 ರ ಲಾಕ್‌ಡೌನ್ ನಂತರ ಬಲವಂತವಾಗಿ ರಾಜೀನಾಮೆ ನೀಡಿದ್ದ ಕಾರ್ಮಿಕರು ಅನುಭವಿಸಿದ ತೊಂದರೆಗಳೂ ಮತ್ತು ಅವರಿಗಾದ ನಷ್ಟವನ್ನು ಅಂದಾಜು ಮಾಡುವುದು ನಮಗೆ ಸಾಧ್ಯವಾಯಿತು.

ಈ ವಿಷಯದ ಬಗ್ಗೆ ಮಾಲೀಕರ ಅಭಿಪ್ರಾಯವನ್ನೂ ದಾಖಲಿಸಬೇಕೆಂದು ಅವರನ್ನು ಇ.ಮೇಲ್ ಮೂಲಕ ಸಂಪರ್ಕಿಸಲಾಯಿತು. ಆದರೆ ನಮ್ಮ ಪತ್ರಕ್ಕೆ ಅವರಿಂದ ಉತ್ತರ ಬರಲಿಲ್ಲ. ಇದರ ಜೊತೆಗೆ ನಾವು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಸಂಖ್ಯೆ ಮತ್ತು 2020 ರ ಏಪ್ರಿಲ್ ನಂತರ ಯಾವುದಾದರೂ ಕಾರ್ಖಾನೆಯು ಮುಚ್ಚುವುದಾಗಿ ಅರ್ಜಿ ಸಲ್ಲಿಸಿದೆಯೇ ಎಂಬುದನ್ನು ತಿಳಿಯಲು ಮಾಹಿತಿ ಹಕ್ಕು ಕಾಯಿದೆ 2005 ರ ಅಡಿಯಲ್ಲಿ ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಇಲಾಖೆಯಲ್ಲಿ ಮಾಹಿತಿಯನ್ನು ಪಡೆದೆವು. ಕರ್ನಾಟಕದಲ್ಲಿ ಗಾರ್ಮೆಂಟ್ಸ್ ಉದ್ಯಮವು ಮಹಿಳಾ ಕಾರ್ಮಿಕರಿಗೆ ಉದ್ಯೋಗ ನೀಡಿರುವ ಅಂಶವು ಪ್ರಾಮುಖ್ಯತೆ ಪಡೆದಿದೆ ಎಂಬುದರ ಜೊತೆಗೆ ಇಲ್ಲಿ ನಡೆಯುತ್ತಿರುವ ಕಾರ್ಮಿಕ ವಿರೋಧೀ ನೀತಿಯನ್ನು ತಡೆಯಲು ಸರ್ಕಾರ ತಕ್ಷಣವೇ ಮಧ್ಯೆ ಪ್ರವೇಶಿಸಬೇಕಿದೆ ಎಂದು ನಮಗೆ ಈ ಅಂಕಿ ಅಂಶದಿಂದ ನಮಗೆ ತಿಳಿದು ಬಂತು.

ಅಧ್ಯಯನದಲ್ಲಿ ಕಂಡುಬಂದದ್ದು.

## I. ಬಲವಂತದ ರಾಜೀನಾಮೆ

1. ಕಂಪನಿಯು ನಷ್ಟದಲ್ಲಿದೆ, ಆದ್ದರಿಂದ ನೀವು ರಾಜೀನಾಮೆ ಕೊಟ್ಟು ಹೋಗಿ ಎಂದು ನಮಗೆ ಹೇಳಿದರು ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡ 17 ಕಾರ್ಖಾನೆಗಳ ಕಾರ್ಮಿಕರು ಹೇಳಿದರು.
2. ಸಮೀಕ್ಷೆಯಲ್ಲಿ ಭಾಗವಹಿಸಿದ 81% ಕಾರ್ಮಿಕರು ತಾವು ರಾಜೀನಾಮೆ ನೀಡಿರುವುದಾಗಿ ತಿಳಿಸಿದರು.
3. ರಾಜೀನಾಮೆ ನೀಡಿದವರಲ್ಲಿ 85% ರಷ್ಟು ಕಾರ್ಮಿಕರನ್ನು ರಾಜೀನಾಮೆ ನೀಡುವಂತೆ ಆಡಳಿತವರ್ಗದವರು ಆಗ್ರಹಿಸಿದ್ದರು.
4. ತಮ್ಮ ಕಾರ್ಖಾನೆಗಳು ಮುಚ್ಚುವಾಗ, ಆಡಳಿತವರ್ಗದವರು, ರಾಜೀನಾಮೆ ನೀಡಿ ಬರಬೇಕಾದ ಹಣ ಪಡೆಯಿರಿ ಅಥವಾ ರಾಜೀನಾಮೆ ಸಲ್ಲಿಸದೆ, ನಿಮ್ಮ ಹಣವನ್ನು ಕಳೆದುಕೊಳ್ಳಿ ಎಂಬ ಎರಡು ಆಯ್ಕೆಗಳನ್ನು ತಮ್ಮ ಮುಂದೆ ಇಟ್ಟಿದ್ದರು ಎಂದು ಹಲವು ಕಾರ್ಮಿಕರು ಹೇಳಿದರು.
5. ಈ ಕಾರ್ಮಿಕ ವಿರೋಧೀ ನೀತಿಗಳೆಲ್ಲವೂ ಕೈಗಾರಿಕಾ ವ್ಯಾಜ್ಯ ಕಾಯಿದೆ ಶಡ್ಯೂಲ್ ರ ಸೆಕ್ಷನ್‌ಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ.
6. ಕಾರ್ಮಿಕರು ಬಲವಂತದಿಂದ ರಾಜೀನಾಮೆ ಕೊಡಲೇ ಬೇಕಾಗುವಂತೆ ಸೃಷ್ಟಿಸಿದ ಕೆಲವು ಸಾಮಾನ್ಯ ಸಂದರ್ಭಗಳು ಈ ಸಮೀಕ್ಷೆಯಲ್ಲಿ ಕಂಡುಬಂದಿದೆ.
   - ಕಂಪನಿಯು ಮುಚ್ಚುತ್ತಿದೆ, ಈಗ ಕಾರ್ಮಿಕರು ರಾಜೀನಾಮೆ ಕೊಡದಿದ್ದರೆ, ಅವರಿಗೆ ಬರಬೇಕಾದ ಹಣವೂ ಬರದೇ ಹೋಗಬಹುದು ಎಂದು ಹೇಳುವುದು
   - ಈ ಮೊದಲು ಕೊಡುತ್ತಿದ್ದ ಸಾರಿಗೆ ಸೌಲಭ್ಯವನ್ನು ನಿಲ್ಲಿಸುವುದು
   - ಸೂಕ್ತ ಸಾರಿಗೆ ವ್ಯವಸ್ಥೆ ಮಾಡದೆ, ಕಾರ್ಮಿಕರನ್ನು ಅದೇ ಕಂಪನಿಯ ಬೇರೆ ಯೂನಿಟ್‌ಗಳಿಗೆ ವರ್ಗಾವಣೆ ಮಾಡುವುದು.

- ಕೊರೊನಾದಿಂದ ಉಂಟಾದ ಪರಿಸ್ಥಿತಿ ಸರಿಹೋಗಲಿ, ಆಮೇಲೆ ನಿಮ್ಮನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಕೆಲವು ಆಡಳಿತವರ್ಗವು ಕಾರ್ಮಿಕರಿಂದ ರಾಜೀನಾಮೆ ಪಡೆಯುವಲ್ಲಿ ಯಶಸ್ವಿಯಾದರು.
- ಕೆಲವು ಕಂಪನಿಗಳಂತೂ ಸುಲಭವಾಗಿ ಕಾರ್ಮಿಕರನ್ನು ಕೆಲಸಕ್ಕೆ ಬರಬೇಡಿ ಎಂದು ಹೇಳಿದವು

## II. ಕಳ್ಳತನದಿಂದ ಮುಚ್ಚುವಿಕೆ

1. ಬೆಂಗಳೂರಿನ ಮೂರು ಸ್ಥಳಗಳಲ್ಲಿ ಸಮೀಕ್ಷೆ ಮಾಡಲು ಆಯ್ಕೆ ಮಾಡಿದ 25 ಫ್ಯಾಕ್ಟರಿಗಳ ಪೈಕಿ, ಕೋವಿಡ್ ಸಂದರ್ಭದಲ್ಲಿ 9 ಕಾರ್ಖಾನೆಗಳು ಸಂಪೂರ್ಣ ಮುಚ್ಚಿವೆ. ಕಂಪನಿಗಳು ಮುಚ್ಚಿಹೋದ ಪರಿಣಾಮವಾಗಿ 5600 ರಿಂದ 7200 ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ ಎಂದು ಸಮೀಕ್ಷೆಯಿಂದ ಕಂಡು ಬಂತು.
2. ಇನ್ನುಳಿದ 16 ಕಾರ್ಖಾನೆಗಳು ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಿವೆ, ಪರಿಣಾಮವಾಗಿ ಸುಮಾರು 11000 ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ ಎಂದು ತಿಳಿದು ಬಂದಿದ
3. ಒಟ್ಟಾರೆ ಹೇಳಬೇಕೆಂದರೆ ಈ 25 ಕಾರ್ಖಾನೆಗಳಲ್ಲಿ ಸುಮಾರು 30000–32000 ಕಾರ್ಮಿಕರು ದುಡಿಯುತ್ತಿದ್ದು, ಕೋವಿಡ್ ಮೊದಲ ತಿಂಗಳುಗಳಲ್ಲಿ ಶೇ.50 ರಿಂದ 62 ರಷ್ಟು ಕಾರ್ಮಿಕರಿಂದ ಬಲವಂತವಾಗಿ ರಾಜೀನಾಮೆ ಪಡೆಯಲಾಗಿದೆ.
4. ಮುಚ್ಚಿಹೋದ ಕಂಪನಿಗಳ ಬಗ್ಗೆ ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯು ನೀಡಿರುವ ಮಾಹಿತಿ ಪ್ರಕಾರ, ಬೆಂಗಳೂರು ನಗರದಲ್ಲಿ ಏಪ್ರಿಲ್ 2020 ರಿಂದೀಚೆಗೆ 65 ಕಂಪನಿಗಳು ಮುಚ್ಚಿದ ದಾಖಲೆ ಇದೆ. ಈ ಅವಧಿಯಲ್ಲಿ ಸುಮಾರು 10000 ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ.
5. ಗಮನಿಸಬೇಕಾದ ಅಂಶವೆಂದರೆ ಮುಚ್ಚಿಹೋದವುಗಳಲ್ಲಿ 60% ರಷ್ಟು ಕಂಪನಿಗಳು 100ಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರನ್ನು ಹೊಂದಿವೆ. ಕಾರ್ಮಿಕರ ಕನಿಷ್ಠ ಸಂಖ್ಯೆಯನ್ನು 100 ರಿಂದ 300 ಕ್ಕೆ ಏರಿಸಿದಲ್ಲಿ ಮುಚ್ಚಿರುವ ಕಂಪನಿಗಳ ಸರಾಸರಿ ಸಂಖ್ಯೆ 89% ಗೆ ಏರುತ್ತವೆ. ಹೀಗಾದಲ್ಲಿ ಬಹುತೇಕ ಕಾರ್ಮಿಕರು ಕಾರ್ಖಾನೆ ಮುಚ್ಚಿಹೋದಲ್ಲಿ ಪ್ರಶ್ನಿಸುವ ಹಕ್ಕನ್ನೇ ಕಳೆದುಕೊಳ್ಳುತ್ತಾರೆ.

## III. ಕಾರ್ಮಿಕರಿಗಾದ ನಷ್ಟಗಳು

1. ಕಾರ್ಮಿಕರು ರಾಜೀನಾಮೆ ನೀಡುವ ನಿರ್ಧಾರ ಮಾಡಲು, ಲಾಕ್‌ಡೌನ್ ಕಾರಣಕ್ಕೆ 2020 ರ ಏಪ್ರಿಲ್ ತಿಂಗಳಿನಿಂದಲೇ ಆದಾಯ ಇಲ್ಲದ್ದು ಬಹು ಮುಖ್ಯ ಕಾರಣವಾಗಿತ್ತು. ಏಪ್ರಿಲ್ ತಿಂಗಳಿನಿಂದ ಸಂಬಳವಿಲ್ಲದೆ ಕುಟುಂಬ ನಿರ್ವಹಣೆ ಮಾಡಲಾಗದೆ ಕಾರ್ಮಿಕರು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿದ್ದರು. ರಾಜೀನಾಮೆ ಕೊಟ್ಟ ತಕ್ಷಣ ಹಣ ಕೊಡುತ್ತೇವೆ ಎಂದು ಹೇಳಿದಾಗ, ತಕ್ಷಣದ ಜೀವನ ನಡೆಸಲು ಹಣ ಸಿಗುತ್ತದೆಯಲ್ಲ ಎಂದು ರಾಜೀನಾಮೆ ನೀಡುವ ನಿರ್ಧಾರಕ್ಕೆ ಬಂದಿದ್ದರು.
2. ರಾಜೀನಾಮೆ ಕೊಟ್ಟ ನಂತರ ತಮಗೆ ಸಿಕ್ಕಿದ ಹಣದ ವಿವರವು ಬಹುತೇಕ ಕಾರ್ಮಿಕರಿಗೆ ಅಸ್ಪಷ್ಟವಾಗಿದೆ, ತಮಗೆ ಬರಬೇಕಾದ ಬಾಕಿಯೆಲ್ಲ ಬಂದಿದೆಯೋ ಇಲ್ಲವೋ ಎಂಬುದು ಅವರಿಗೆ ಸ್ಪಷ್ಟವಾಗಿ ತಿಳಿದಿಲ್ಲ.

3. ಆಡಳಿತವರ್ಗವೇ ಕೆಲಸಕ್ಕೆ ಬೇಡ ಎಂದ ಈ ಸಂದರ್ಭದಲ್ಲಿಯೂ, ಕಾರ್ಮಿಕರೇ ರಾಜೀನಾಮೆ ಸಲ್ಲಿಸಿದ್ದರಿಂದ ಅದನ್ನು ಸ್ವಯಂ ರಾಜೀನಾಮೆ ಎಂದೇ ಪರಿಗಣಿಸಿ ಇನ್ನಾವ ಪರಿಹಾರದ ಮೊತ್ತವನ್ನೂ (ಪ್ರತಿವರ್ಷದ ಸೇವೆಗೆ 15 ದಿನದ ವೇತನ) ಪಾವತಿಸಲಿಲ್ಲ.
4. ಗ್ರಾಚುಟಿಯನ್ನು ಲೆಕ್ಕ ಹಾಕುವ ಸೂತ್ರವೆಂದರೆ, ಕಾರ್ಮಿಕರು ಕೆಲಸ ಬಿಟ್ಟಾಗ ಇರುವ ವೇತನದ ಆಧಾರದ ಮೇಲೆ, ಪ್ರತಿ ವರ್ಷಕ್ಕೆ 15 ದಿನದ ವೇತನವನ್ನು ಗ್ರಾಚುಟಿ ಎಂದು ಪಾವತಿಸಲಾಗುತ್ತದೆ. ಸಮೀಕ್ಷೆಯಲ್ಲಿ ಪಾಲ್ಗೊಂಡ 71% ಕಾರ್ಮಿಕರು ಗಾರ್ಮೆಂಟ್ಸ್ ಉದ್ಯಮದಲ್ಲಿ 5 ರಿಂದ 15 ವರ್ಷ ಸೇವೆ ಸಲ್ಲಿಸಿದ್ದಾರೆ. ಆದರೆ ಸಮೀಕ್ಷೆಯಲ್ಲಿ ಪಾಲ್ಗೊಂಡ 60% ಕಾರ್ಮಿಕರ ಈಗಿನ ಸೇವಾವಧಿಯು, ಕೆಲವು ತಿಂಗಳಿಂದ 5 ವರ್ಷದ ಒಳಗೆ ಇದೆ. ಆದ್ದರಿಂದ ಈ ಕಾರ್ಮಿಕರಿಗೆ ಯಾವುದೇ ಗ್ರಾಚುಟಿ ಸಿಗಲಿಲ್ಲ.
5. ಕರ್ನಾಟಕ ರಾಜ್ಯದಲ್ಲಿ ರೂ. 7800 ರಿಂದ 10000ದ ವರೆಗೆ ಅತಿ ಕಡಿಮೆ ಮೊತ್ತದ ಕನಿಷ್ಠವೇತನ ಪಡೆಯುತ್ತಿರುವುದು ಗಾರ್ಮೆಂಟ್ಸ್ ಕಾರ್ಮಿಕರು. ಕಾರ್ಮಿಕರು ಕನಿಷ್ಠವಾಗಿ ಬದುಕಲು ರೂ. 18,000 ರಿಂದ 20,000 ದ ವರೆಗೂ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಬದುಕಲು ಬೇಕಾದ ಹಣ ಮತ್ತು ತಾವು ದುಡಿಯುವ ಹಣ ಎರಡರ ನಡುವಿನ ವ್ಯತ್ಯಾಸವನ್ನು ಸರಿತೂಗಿಸಲು ಕಾರ್ಮಿಕರು ಸಾಲ ಮಾಡುತ್ತಾರೆ, ಅಥವಾ ಹೀಗೆ ಕಾಲಕಾಲಕ್ಕೆ ಪಿ.ಎಫ್ ತೆಗೆದುಕೊಳ್ಳುತ್ತಾರೆ.
6. ಇಲ್ಲಿಯವರೆಗೂ ಆದ ಬೆಳವಣಿಗೆಗಳಿಂದ ಕಾರ್ಮಿಕರು ಬಹಳಷ್ಟು ಕಳೆದುಕೊಂಡಿದ್ದಾರೆ.
    - ಕಾರ್ಖಾನೆಗಳು ಕಾನೂನು ಪ್ರಕಾರ ಅಧಿಕೃತವಾಗಿ ಮುಚ್ಚಿದ್ದರೆ ಕಾರ್ಮಿಕರಿಗೆ ಪರಿಹಾರ ಧನ ನೀಡಬೇಕಿತ್ತು. ಕಾರ್ಮಿಕರು ಅದನ್ನು ಕಳೆದುಕೊಂಡರು.
    - ಬಲವಂತದಿಂದ ರಾಜೀನಾಮೆ ಕೊಟ್ಟ ಸಂದರ್ಭದಲ್ಲಿ ಕಾರ್ಮಿಕರ ಸೇವಾವಧಿಯು ಕಡಿತಗೊಂಡಿತು.
    - ಸೇವಾವಧಿ ಕಡಿತಗೊಂಡಿದ್ದರಿಂದ ಅವರು ಪಿ.ಎಫ್‌ನಲ್ಲಿ ಸಿಗುವ ಪಿಂಚಣಿಯಿಂದ ವಂಚಿತರಾದರು.
    - ನಿರಂತರವಾಗಿ 10 ವರ್ಷ ಸೇವೆ ಸಲ್ಲಿಸಿದ್ದರೆ, ಕಾರ್ಮಿಕರು ಪಿ.ಎಫ್ ಪಿಂಚಣಿಗೆ ಅರ್ಹರಾಗುತ್ತಿದ್ದರು
    - ಸಮೀಕ್ಷೆಯಲ್ಲಿ ನಾವು ಮಾತನಾಡಿಸಿದ, 55 ವರ್ಷಕ್ಕೂ ಹೆಚ್ಚು ವಯಸ್ಸಾದ ಕಾರ್ಮಿಕರಿಗೆ ಕೆಲಸ ಕಳೆದುಕೊಂಡ ನಂತರ ಯಾವುದೇ ಕೆಲಸ ದೊರಕಲಿಲ್ಲ. ಬಲವಂತದ ರಾಜೀನಾಮೆಯಿಂದ ಈ ವಯೋಮಿತಿಯ ಮಹಿಳಾ ಕಾರ್ಮಿಕರನ್ನು ದುಡಿಮೆಯ ಅವಕಾಶದಿಂದಲೇ ಹೊರಹಾಕಲಾಯಿತು ಅವರು ಹಸಿವಿನಿಂದ ನರಳುವಂತಾಯಿತು.
    - ಪೀಸ್‌ರೇಟ್ ಕೆಲಸ ಮಾಡುತ್ತಿರುವುದರಿಂದ ತಮ್ಮ ತಿಂಗಳ ಆದಾಯ ಹೆಚ್ಚಾಗಿದೆಯಂದೂ, ಟಾರ್ಚರ್ ಇಲ್ಲದೇ ಕೆಲಸ ಮಾಡುತ್ತಿದ್ದೇವೆಂದೂ ಹೊಗಳಿದರು. ಆದರೆ ಅವರು ಪಿ.ಎಫ್, ಇ.ಎಸ್.ಐ ನಂತಹ ಸಾಮಾಜಿಕ ಸುರಕ್ಷೆ ಮತ್ತು ಗ್ರಾಚುಟಿ ಸೌಲಭ್ಯವನ್ನು ಕಳೆದುಕೊಂಡಿದ್ದರು.
    - ಸರ್ವಿಸ್ ಕಡಿತವಾದ್ದರಿಂದ ಕಾರ್ಮಿಕರು ತಮ್ಮ ಬೋನಸ್, ಬಡ್ತಿ ಮತ್ತು ಕೆಲಸದಿಂದ ಸಿಗುತ್ತಿದ್ದ ಇತರ ಸಾಂದರ್ಭಿಕ ಸೌಲಭ್ಯಗಳನ್ನು ಕಳೆದುಕೊಳ್ಳಬೇಕಾಯಿತು.

7. ಲಾಕ್‌ಡೌನ್ ಪ್ರಾರಂಭವಾದ ನಂತರ ಕುಟುಂಬದ ಆದಾಯವು ಗಣನೀಯವಾಗಿ ಇಳಿಕೆಯಾಗಿದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡ 96% ಕಾರ್ಮಿಕರು ಹೇಳಿದರು; 48% ಕಾರ್ಮಿಕರು ತಮ್ಮ ಕುಟುಂಬದ ಆದಾಯವು 30 ರಿಂದ 50% ನಷ್ಟು ಇಳಿಕೆಯಾಗಿದೆ ಎಂದು ಹೇಳಿದರು; 17% ಕಾರ್ಮಿಕರು ತಮ್ಮ ಕುಟುಂಬದ ಆದಾಯವು 50 ರಿಂದ 70% ನಷ್ಟು ಇಳಿಕೆಯಾಗಿದೆ ಎಂದು ಹೇಳಿದರು; 8% ಕಾರ್ಮಿಕರು 70 ರಿಂದ 90 % ನಷ್ಟು ಆದಾಯ ಕಡಿಮೆಯಾಗಿದೆ ಎಂದು ಹೇಳಿದರು.
8. ಸಮೀಕ್ಷೆಯಲ್ಲಿ ಪಾಲ್ಗೊಂಡ 53% ಕಾರ್ಮಿಕರು ತಮ್ಮ ಕುಟುಂಬದ ವೆಚ್ಚವನ್ನು ರೂ. 5000 ರಿಂದ 10000 ಒಳಗೆ ಪೂರೈಸಿಕೊಳ್ಳುತ್ತಿದ್ದಾರೆ.
9. ಆದಾಯ ಮತ್ತು ಕೆಲಸ ಕಳೆದುಕೊಂಡಿದ್ದರ ಗಂಭೀರ ಪರಿಣಾಮವಾಗಿ ಕಾರ್ಮಿಕರ ಕುಟುಂಬವು ಅಪೌಷ್ಠಿಕತೆಗೆ ಸಿಲುಕಿತು. ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ 86% ಕಾರ್ಮಿಕರು, ಕುಟುಂಬದ ಖರ್ಚನ್ನು ಕಡಿಮೆ ಮಾಡಿ ಪರಿಸ್ಥಿತಿಯನ್ನು ನಿಭಾಯಿಸಲು ಪ್ರಯತ್ನಿಸಿದೆವು ಎಂದು ಹೇಳಿದರು.
10. ಶಾಲೆಗೆ ಹೋಗುವ ಮಕ್ಕಳಿದ್ದವರು, ತಮ್ಮ ಮಕ್ಕಳನ್ನು ಖಾಸಗಿ ಶಾಲೆಯಿಂದ ಸರ್ಕಾರೀ ಶಾಲೆಗೆ ಸೇರಿಸಿದೆವೆಂದು ಹೇಳಿದರು. ಕಲವರು ಇಬ್ಬರು ಮಕ್ಕಳಲ್ಲಿ ಒಬ್ಬರನ್ನು ಶಾಲೆಗೆ ಸೇರಿಸಿ ಮತ್ತೊಬ್ಬರಿಗೆ ಈ ವರ್ಷ ಶಾಲೆ ಬೇಡ ಎಂದು ತೀರ್ಮಾನಿಸಿದ್ದರು. ಶಾಲೆಗೆ ಫೀಸ್ ಕಟ್ಟಲು ಸಾಧ್ಯವಾಗದೇ, ಆನ್‌ಲೈನ್ ಕ್ಲಾಸ್‌ಗೆ ಬೇಕಾದ ಸ್ಮಾರ್ಟ್ ಫೋನ್ ಇಲ್ಲದೇ ಈ ತೀರ್ಮಾನಕ್ಕೆ ಕಾರ್ಮಿಕರು ಬಂದಿದ್ದರು.

## IV. ಶಿಫಾರಸುಗಳು

1. ಕಾರ್ಮಿಕ ಇಲಾಖೆಯು ಈ ಕೂಡಲೇ ಕಾರ್ಖಾನೆಗಳನ್ನು ತನಿಖೆಗೊಳಪಡಿಸಿ ಕಾರ್ಮಿಕರ ಸಾಮೂಹಿಕ ರಾಜೀನಾಮೆಯು ಸ್ವ ಇಚ್ಛೆಯಿಂದ ನೀಡಿದ್ದೋ, ಅಥವಾ ಬಲವಂತವಾಗಿ ಪಡೆದದ್ದೋ ಎಂದು ತನಿಖೆಗೊಳಪಡಿಸಿ ಸ್ವಯಂ ದೂರನ್ನು ದಾಖಲಿಸಿಕೊಳ್ಳಬೇಕು. ಜೊತೆಗೆ 'ರಾಜೀನಾಮೆ' ನೀಡಿದ ಸಂದರ್ಭದಲ್ಲಿ ಅವರಿಗೆ ಪರಿಹಾರವನ್ನು ನೀಡಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.
2. ಕಾರ್ಮಿಕ ವಿರೋಧೀ ನೀತಿಗಳ ಬಗ್ಗೆ ಕಾರ್ಮಿಕ ಇಲಾಖೆಯು ಸಮರ್ಥ ಕಾರ್ಯಕ್ರಮಗಳನ್ನು ರೂಪಿಸಬೇಕು. ದಿನಪತ್ರಿಕೆಗಳಲ್ಲಿ, ರೇಡಿಯೋ ಮೂಲಕ, ಮತ್ತು ಸಾಮಾಜಿಕ ಜಾಲತಾಣದ ಮೂಲಕವೂ ಪ್ರಚಾರ ನಡೆಸಬೇಕು.
3. ಗಾರ್ಮೆಂಟ್ಸ್ ಮಾಲೀಕರು ಕೇವಲ ಸರ್ಕಾರ ನಿಗದಿ ಪಡಿಸಿದ ಕನಿಷ್ಠವೇತನವನ್ನು ಮಾತ್ರವೇ ನೀಡುತ್ತಾರೆ. ಆದ್ದರಿಂದ ಕಳೆದ ಬಾರಿ 2019 ರಲ್ಲಿ 9% ಮಾತ್ರ ಹೆಚ್ಚಿಸಿ ಕನಿಷ್ಠವೇತನ ನಿಗದಿ ಮಾಡಲಾಗಿತ್ತು. ಆದ್ದರಿಂದ ತಕ್ಷಣವೇ ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠವೇತನವನ್ನು ಹೆಚ್ಚಿಸಬೇಕು.
4. ಅತಿ ಶೀಘ್ರದಲ್ಲಿ ಕಾರ್ಮಿಕ ಸಂಹಿತೆಗಳು ಜಾರಿಯಾಗಬಹುದಾದ್ದರಿಂದ, ಆ ನೀತಿ ನಿಯಮಗಳು ರಾಜ್ಯದ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರ ಕೆಲಸದ ಪರಿಸ್ಥಿತಿ ಮತ್ತು ಬದುಕಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳುತ್ತದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು.
5. ಸರ್ಕಾರಗಳು ಗಾರ್ಮೆಂಟ್ಸ್ ಕಾರ್ಮಿಕರಿಗೆ ಶೂನ್ಯ ಬಡ್ಡಿಯಲ್ಲಿ ಮನೆ ಸಾಲವನ್ನು ಒದಗಿಸಬೇಕು.

6. 50 ವರ್ಷ ವಯಸ್ಸಾಗಿರುವ ಕಾರ್ಮಿಕರು ಕೆಲಸ ಕಳೆದುಕೊಂಡು ಈಗ ಪೀಸ್ ರೇಟ್ ಕೆಲಸಗಾರರಾಗಿದ್ದಾರ. ಅಂತಹ ಕಾರ್ಮಿಕರಿಗೆ ಆಹಾರ ವಿತರಣೆ ಮತ್ತು ಮಾಸಿಕ ಪಿಂಚಣಿಗಳನ್ನು ಒದಗಿಸಲು ಸರ್ಕಾರ ಸಮೀಕ್ಷೆ ನಡೆಸಬೇಕು.
7. ಗಾರ್ಮೆಂಟ್ಸ್ ಕಾರ್ಮಿಕರ ಪೌಷ್ಠಿಕತೆಯ ಮಟ್ಟವನ್ನು ಮತ್ತು ಆರೋಗ್ಯ ಪರಿಸ್ಥಿತಿಯನ್ನು ತಿಳಿಯಲು ರಾಜ್ಯ ಮಹಿಳಾ ಆಯೋಗವು ತಳಮಟ್ಟದಲ್ಲಿ ಕಾರ್ಮಿಕರ ಸಮೀಕ್ಷೆ ನಡೆಸಬೇಕು. ಈ ಬಗ್ಗೆ ಸಾರ್ವಜನಿಕ ಆಹಾರ ವಿತರಣೆ ಮತ್ತು ಆರೋಗ್ಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಬೇಕು.

-----